ಶ್ರೀ ಪಿ.ಎಂ. ಅಶೋಕ್ : ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಹೇಳಿದ್ದೆ. ನಮ್ಮ ರಾಮದುರ್ಗ ತಾಲ್ಲೂಕಿನ ಹೊಸಕೋಟೆ ಗ್ರಾಮದಲ್ಲಿ ಒಂದು ಆಸ್ಪತ್ರೆಯ inauguration ಆಗಬೇಕಾಗಿತ್ತು.

ಅಧ್ಯಕ್ಷರು : ಈಗ ಹೇಳಿದ್ದೇನೆ. ಮತ್ತೆ ಮತ್ತೆ ಅವಕಾಶವಿಲ್ಲ. ಅವಕಾಶ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು : ಯಾವುದೂ ದಾಖಲೆಗೆ ಹೋಗುತ್ತಿಲ್ಲ. ಒಂದು ಸಲ ತೀರ್ಮಾನವಾದ ಮೇಲೆ ಪುನಃ ಕೇಳುತ್ತೀರಲ್ಲ?

(ಉ) ವಿಷಯ : ಕೃಷ್ಣಾ ನದಿ ಪಾತ್ರ ಬತ್ತಿದ್ದು ಕುಡಿಯುವ ನೀರಿಗೆ ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಬಗ್ಗೆ.

ಶ್ರೀ ಸಿದ್ದು ಸವದಿ (ತೇರದಾಳ) : ಉತ್ತರ ಕರ್ನಾಟಕದ ಜೀವನದಿಯಾದ ಕೃಷ್ಣಾ ನದಿಯ ಪಾತ್ರ ಬತ್ತಿ ಹೋಗಿದ್ದರಿಂದ, ಸಾವಿರಾರು ಎಕರೆಯಲ್ಲಿ ಬೆಳೆದ ಬೆಳೆಗೆ ಹಾನಿಯಾಗುವ ಪರಿಸ್ಥಿತಿ ಬಂದೊದಗಿದೆ. ಅದಲ್ಲದೆ, ನದಿಯ ದಡದಲ್ಲಿರುವ ಹತ್ತಾರು ನಗರಗಳು ಅದು ಜಮಖಂಡಿ, ಮುಧೋಳ, ಬನಹಟ್ಟಿ, ತೇರದಾಳ, ಕುಡುಚಿ ಇರಬಹುದು, ಹೀಗೆ ಹತ್ತಾರು ನಗರಗಳಿಗೆ ಕುಡಿಯುವ ನೀರಿಲ್ಲದೆ ಅತ್ಯಂತ ಗಂಭೀರ ಪರಿಸ್ಥಿತಿ ಬಂದೊದಗಿದೆ. ಆ ಕಾರಣಕ್ಕಾಗಿ ತಕ್ಷಣ ಇಂದೇ ಮಹಾರಾಷ್ಟ್ರದ ಕೊಯ್ನಾದಿಂದ ನೀರು ಬಿಡಿಸುವ ಪ್ರಕ್ರಿಯೆಗೆ ಸರ್ಕಾರದಿಂದ ಚಾಲನೆ ದೊರಕಬೇಕು. ಅಲ್ಲಿ ನದಿ ಬತ್ತಿ ಹೋಗಿ ಈಗಾಗಲೆ ಒಂದು, ಒಂದೂವರೆ ತಿಂಗಳಾಯಿತು. ಬೇಸಿಗೆ ದಿವಸಗಳಲ್ಲಿ ಭಯಾನಕ ಪರಿಸ್ಥಿತಿ ನಿರ್ಮಾಣ ವಾಗಿದೆ. ದಯಮಾಡಿ, ನೀರಿನ ಸಲುವಾಗಿ ಮಹಾರಾಷ್ಟ್ರಕ್ಕೆ ಬಾಕಿ ಕೊಡುವುದಿದ್ದರೆ, ಆ ಬಾಕಿಯನ್ನು pay ಮಾಡಿ ಮತ್ತೆ 4 ರಿಂದ 5 ಟಿ.ಎಂ.ಸಿ. ನೀರನ್ನು ಕೊಯ್ನಾ ಡ್ಯಾಂನಿಂದ ಕೃಷ್ಣಾ ನದಿಗೆ ಬಿಡಿಸಿ, ಕುಡಿಯುವ ನೀರು ಮತ್ತು ರೈತರು ಬೆಳೆದ ಸಾವಿರಾರು ಎಕರೆ ಕಬ್ಬಿನ ಬೆಳೆ ಅಥವಾ ಆರ್ಥಿಕ

ಬೆಳೆ, ರೆವಿನ್ಯೂ ಬೆಳೆಯನ್ನು ಉಳಿಸುವ ಪ್ರಯತ್ನ ಸರ್ಕಾರದಿಂದ ಆಗಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಇದು ಶೂನ್ಯ ವೇಳೆ. ಎಲ್ಲರೂ ಎದ್ದುನಿಂತರೆ ಹೇಗೆ? Zero hour ನಲ್ಲಿ ಎಲ್ಲರೂ ಮಾತನಾಡಬೇಕೆಂದರೆ ಕಷ್ಟ.

ಶ್ರೀ ಭರಮಗೌಡ ಅಲಗೌಡ ಕಾಗೆ : ಕೃಷ್ಣಾ ನದಿ ನೀರು ಸಂಪೂರ್ಣ ಬತ್ತಿದೆ. ಈಗ ನೀರು ಬಿಡಿಸಿದರೆ ಸ್ವಲ್ಪ ಮುಂದೆ ಬರುತ್ತದೆ. ಸಂಪೂರ್ಣವಾಗಿ ಹಿಪ್ಪರಗಿ ಅಣೆಕಟ್ಟಿನ backside ನಲ್ಲಿರುವ ಎಲ್ಲಾ ನೀರು ಬತ್ತಿಹೋದರೆ ಅವರು ಎಷ್ಟು ಟಿಎಂಸಿ ನೀರು ಬಿಟ್ಟರೂ ಆ ನೀರು ಮುಂದೆ ಹೋಗುವುದಿಲ್ಲ. ಈಗಲೂ ನದಿಯ ಹತ್ತಿರ ಸ್ವಲ್ಪ ನೀರು ಇದೆ. ಇನ್ನು 15 ದಿವಸಗಳಲ್ಲಿ ನೀರು ಬಿಡಿಸಿದರೆ ಆ ನೀರು ಉಪಯೋಗಕ್ಕೆ ಬರುತ್ತದೆ. ಇಲ್ಲದಿದ್ದರೆ ಬೆಳೆ ಹಾನಿಯೂ ಆಗುತ್ತದೆ ಕುಡಿಯುವ ನೀರಿನ ಸಮಸ್ಯೆಯೂ ಬರುತ್ತದೆ.

ಅಧ್ಯಕ್ಷರು : ಅವರು ಉತ್ತರ ಹೇಳಲಿ.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ಇವತ್ತು ಆಲಮಟ್ಟಿ ಜಲಾಶಯದಲ್ಲಿ ನೀರಿನ ಪ್ರಮಾಣ ಬಹಳ ಕಡಿಮೆಯಾಗಿದೆ. ಹೀಗಾಗಿ ಅಲ್ಲಿ ಬಿಜಾಪುರ ನಗರಕ್ಕೆ ಮತ್ತು ಬಿಜಾಪುರ ಜಿಲ್ಲೆಗೆ ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿರುವ ಸಂದರ್ಭದಲ್ಲಿ ಕೊಯ್ನಾ ಡ್ಯಾಂನಿಂದ ಹೆಚ್ಚಿಗೆ ನೀರನ್ನು ಬೇಗನೆ ಬಿಡಿಸಿದರೆ ಮಾತ್ರ ಆ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಇವತ್ತು ಆಲಮಟ್ಟಿ ಜಲಾಶಯದಲ್ಲಿ ಕೇವಲ ಐದೂವರೆ ಟಿಎಂಸಿ ನೀರು ಇದೆ. ಹೀಗಾಗಿ ಅಲ್ಲಿ ಬಹಳ ಗಂಭೀರವಾದ ಸಮಸ್ಯೆಯಿದೆ, ಹೀಗಾಗಿ ಕೂಡಲೇ ನಮ್ಮ ಸರ್ಕಾರ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ ಆಲಮಟ್ಟಿ ಡ್ಯಾಂಗೂ ಕೂಡ ನೀರು ಬರುವಂಥ ರೀತಿಯಲ್ಲಿ ನೀರು ಬಿಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಕೃಷ್ಣಾ ಜಲಾನಯನ ಪ್ರದೇಶದ ಶಾಸಕರು ಏನು ಆತಂಕ ವ್ಯಕ್ತಪಡಿಸಿದ್ದಾರೆ ಅದನ್ನು ಮನಗಂಡು ನಾನು ಮಹಾರಾಷ್ಟ್ರದ ನೀರಾವರಿ ಸಚಿವರಿಗೆ ಮತ್ತು ಮುಖ್ಯಮಂತ್ರಿಗಳಾದ ಚವ್ಹಾಣ್‌ರವರಿಗೆ ಇಲ್ಲಿನ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತೇನೆ. ಈಗಾಗಲೇ ಮಹಾರಾಷ್ಟ್ರದ

ನೀರಾವರಿ ಸಚಿವರನ್ನು ಕಂಡು ಅವರಿಗೆ ಒಂದು ಪತ್ರವನ್ನು ಕೊಟ್ಟು ಕೂಡಲೇ ನಮ್ಮ ಈ ಭಾಗಕ್ಕೆ ಸುಮಾರು 4 ರಿಂದ 5 TMC ನೀರನ್ನು ಬಿಡಬೇಕು. ಈ ಹಿಂದೆ ಯಾವ ರೀತಿ ತಾವು ಬಿಟ್ಟಿದ್ದೀರಿ ಅದೇ ಮಾದರಿಯಲ್ಲಿ ಬಿಡಬೇಕು. ಜೊತೆಗೆ ಒಂದೇ ಸಾರಿಗೆ ಅಷ್ಟೂ ನೀರನ್ನು ಬಿಡಬೇಕು, ಹಂತ ಹಂತವಾಗಿ ನೀರು ಬಿಟ್ಟರೆ ಅದು ಸರಿಯಾಗಿ ಮುಟ್ಟುವುದಿಲ್ಲ, ಈ ಕೂಡಲೇ ನೀರನ್ನು ಬಿಟ್ಟರೆ ನದಿ ಪಾತ್ರದಲ್ಲಿ ಏನು ನೀರಿನ ಹಸಿ ಇದೆ ಅದರ ಅನುಗುಣವಾಗಿ evaporation loss ಆಗುವುದಿಲ್ಲ ವೆಂದು ಮನವರಿಕೆ ಮಾಡಿಕೊಟ್ಟಿದ್ದೇನೆ. ಅವರು ಕೂಡ ಮಾನವೀಯತೆಯ ದೃಷ್ಟಿಯಿಂದ ನಾವು ಇದನ್ನು ತೆಗೆದುಕೊಳ್ಳುತ್ತೇವೆ, ನಾವು ನಮ್ಮ ICC meeting ನ್ನು ಮಾಡಿ ತಮಗೆ ಖಂಡಿತವಾಗಿ ಬೇಸಿಗೆ ಕಾಲದಲ್ಲಿ ನಮ್ಮ ನೀರಿನ ಮಟ್ಟ ನಮ್ಮ ನೀರಿನ ಅವಶ್ಯಕತೆ ನೋಡಿಕೊಂಡು ತಮಗೆ ಕುಡಿಯುವ ನೀರಿಗೆ ಸಹಕಾರ ಕೊಡುತ್ತೇವೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಆ ಒತ್ತಡವನ್ನು ನಾನು ಮುಂದುವರಿಸಿದ್ದೇನೆ. ಆದಷ್ಟು ಬೇಗನೆ ಕೃಷ್ಣಾ ಜಲಾನಯನ ಪ್ರದೇಶದ ಜನಗಳ ಕುಡಿಯುವ ನೀರಿಗೆ ತೊಂದರೆ ಯಾಗದಂತೆ ನಿಗಾ ವಹಿಸುತ್ತಿದ್ದೇವೆ. ಕುಡಿಯುವ ನೀರಿಗಾಗಿ ಈಗಿರುವಂಥ ನೀರನ್ನು ನಿರ್ವಹಣೆ ಮಾಡುವ ಮುಖಾಂತರ ಬಿಜಾಪುರ, ಬಾಗಲಕೋಟೆ ಇವೆರಡೂ ದೊಡ್ಡ ನಗರಗಳು. ಇದರ ಜೊತೆಗೆ ಇತರ ನಗರಗಳು ಮತ್ತು ಗ್ರಾಮೀಣ ಪ್ರದೇಶಕ್ಕೆ ನೀರು ನಿರ್ವಹಣೆಗಾಗಿ ಈಗಾಗಲೇ ಒಂದು time table ಅನ್ನು ಹಾಕಿ ಆದೇಶ ಕೂಡ ಕೊಟ್ಟಿದ್ದೇವೆ. ಆದ್ದರಿಂದ ಆ ಭಾಗದ ರೈತರಿಗೆ ಯಾವುದೇ ರೀತಿಯಿಂದ ತೊಂದರೆಯಾಗದ ರೀತಿಯಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

ಶ್ರೀ ಸಿದ್ದು ಸವದಿ : ಅಧ್ಯಕ್ಷರೆ, ಆದಷ್ಟು ಬೇಗನೆ ಎನ್ನುವುದಕ್ಕಿಂತಲೂ ಈ ವಿಷಯ ಬಹಳ ಸೀರಿಯಸ್ ಇದೆ. ಇವತ್ತೇ ಅವರ ಜೊತೆಗೆ ಮಾತನಾಡಿದರೆ ಅನುಕೂಲವಾಗುತ್ತದೆ. ನೀವು ಯಾವ ರೀತಿ ಕಾವೇರಿಗೆ ಮಹತ್ವ ಕೊಡುತ್ತೀರೋ ಅದೇ ರೀತಿ ಕೃಷ್ಣಾ ನದಿಗೂ ಕೊಡಿ. ಇವತ್ತೇ ನಮ್ಮ ಸಿಎಂ ರವರು ಮಹಾರಾಷ್ಟ್ರದ ಸಿಎಂ ಜೊತೆಗೆ ಮಾತನಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಶೂನ್ಯವೇಳೆಯಲ್ಲಿ ವಿಷಯವನ್ನು ಗಮನಕ್ಕೆ ತರಬೇಕು. ನೀವು ಅವರ ಹತ್ತಿರ ಕುಳಿತುಕೊಂಡು ಚರ್ಚೆ ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ : ಅವರ ಭಾವನೆಯಂತೆ ಇವತ್ತೇ ಸನ್ಮಾನ್ಯ ಮುಖ್ಯಮಂತ್ರಿಗಳಾದ ಡಿ.ವಿ. ಸದಾನಂದಗೌಡರವರಿಂದ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿಸುತ್ತೇನೆ.

ಶ್ರೀ ಕೆ. ಅಭಯಚಂದ್ರ (ಮೂಡಬಿದ್ರಿ) : ನಮ್ಮ ಭಾಗದಲ್ಲಿ ನಡೆದಂಥ ವಿಚಾರದ ಬಗ್ಗೆ ಹೇಳುವುದಾದರೆ, ಅಲ್ಲಿನ ರಸ್ತೆಯ ಉಬ್ಬು ವಿಚಾರವಾಗಿ ಪಂಚಾಯಿತಿ ಅಧ್ಯಕ್ಷರು ಹಾಗೂ ಶಾಲಾ ಮಕ್ಕಳ ಮೇಲೆ ಲಾಠಿ ಚಾರ್ಜ್ ಆಗಿತ್ತು. ಶೂನ್ಯವೇಳೆಯಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ, ಇನ್ನೂ ಕೂಡ ಅದಕ್ಕೆ ಉತ್ತರ ಕೊಟ್ಟಿಲ್ಲ. ಸೂಕ್ತವಾದ ಉತ್ತರ ಬೇಕೆಂದು ನಾನು ಮಾನ್ಯ ಕಾನೂನು ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ಸಂಬಂಧಪಟ್ಟ ಸಚಿವರಿಂದ ಇವತ್ತು ಅಥವಾ ನಾಳೆ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು : ಆಯಿತು. ತಾವು ಪ್ರಸ್ತಾಪ ಮಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕುಡಿಯುವ ನೀರಿನ ಬಗ್ಗೆ ನಾನು ಕೇಳಿದ್ದೆ.

ಅಧ್ಯಕ್ಷರು : ನಿಮ್ಮದೂ ನಾಳೆಗೆ ಹಾಕಿದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಅವರದ್ದು ಶೂನ್ಯವೇಳೆ ಇದ್ದರೆ ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ : ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಶೂನ್ಯವೇಳೆಯಲ್ಲಿ ಕೊಟ್ಟಿದ್ದಾರೆ.

ಅಧ್ಯಕ್ಷರು ನಾಳೆಗೆ ಹಾಕಿದ್ದೇನೆ. ಆಯಿತು ಕೇಳಿಬಿಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಇವತ್ತೇ ಅಲ್ಲಿ ಕುಡಿಯುವ ನೀರು ಇಲ್ಲ. ಟ್ಯಾಂಕರ್ ಮೂಲಕ ಏರುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕಲ್ಲವೆ? ಇದರ ಬಗ್ಗೆ ಚರ್ಚೆ ಮಾಡದೇ ಇನ್ನೇನು ಚರ್ಚೆ ಮಾಡೋಣ?

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.